## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಾ: ಸರೋಜಿನಿ ಮಹಿಷಿ ಸಮಿತಿ ಶಿಫಾರಸ್ಸುಗಳನ್ನು ಜಾರಿಗೊಳಿಸುವುದನ್ನು ನೋಡಿಕೊಳ್ಳಲು ಸಚಿವ ಸಂಪುಟದ ಉಪ ಸಮಿತಿಯನ್ನು ಖಾಯಂ ಆಗಿ ನೇಮಿಸುವ ಬಗ್ಗೆ.

****

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 27 ಎಸ್‌ಎಲ್‌ಸಿ 89, ದಿನಾಂಕ: 16–3–1990.

2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 9 ಎಸ್‌ಎಲ್‌ಸಿ 90, ದಿನಾಂಕ: 23–11–1990.

3) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 14 ಎಸ್‌ಎಲ್‌ಸಿ 91, ದಿನಾಂಕ: 30–7–1991.

4) ಟಿಪ್ಪಣಿ ಸಂಖ್ಯೆ: ಸಿಎಂ 168 ಡಿಇಪಿ (4)91, ದಿನಾಂಕ: 10–8–1991.

**ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 14 ಎಸ್‌ಎಲ್‌ಸಿ 91, ಬೆಂಗಳೂರು, ದಿನಾಂಕ: 19–8–1991.**

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ: 3ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಡಾ. ಸರೋಜಿನಿ ಮಹಿಷಿಸಮಿತಿ ಶಿಫಾರಸ್ಸುಗಳನ್ನು ಜಾರಿಗೊಳಿಸುವುದನ್ನು ನೋಡಿಕೊಳ್ಳಲು ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಟ್ಟು 6 ಸಚಿವ ಸದಸ್ಯರುಗಳನ್ನೊಳಗೊಂಡ ಸಚಿವ ಸಂಪುಟದ ಉಪ ಸಮಿತಿಯನ್ನು ಖಾಯಂ ಆಗಿ ನೇಮಿಸಿ ಆದೇಶವನ್ನು ಹೊರಡಿಸಲಾಗಿತ್ತು. ಉಲ್ಲೇಖಿತ ಕ್ರಮ ಸಂಖ್ಯೆ: 4ರಲ್ಲಿ ಆಹಾರ ಮತ್ತು ನಾಗರಿಕ ಸಚಿವರಾದ ಶ್ರೀ ಟಿ.ಎನ್. ನರಸಿಂಹ ಮೂರ್ತಿಯವರನ್ನು ಉಪ ಸಮಿತಿಯ ಸದಸ್ಯರನ್ನಾಗಿ ನೇಮಿಸಲು ಮುಖ್ಯಮಂತ್ರಿಯವರು ನಿರ್ದೇಶಿಸಿದ್ದಾರೆ ಎಂದು ತಿಳಿಸಲಾಗಿದೆ. ಆದ ಕಾರಣ, ದಿನಾಂಕ: 30–7–1991ರಲ್ಲಿ ರಚಿಸಿದ ಸಂಪುಟದ ಉಪ ಸಮಿತಿಯನ್ನು ಪುನರ್ ರಚಿಸಲಾಗಿದೆ.

### ಆದೇಶ

1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 14 ಎಸ್‌ಎಲ್‌ಸಿ 91, ದಿನಾಂಕ: 30–7–1991ರಲ್ಲಿ ಡಾ. ಸರೋಜಿನಿ ಮಹಿಷಿ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುವುದನ್ನು ನೋಡಿಕೊಳ್ಳಲು ಸಚಿವ ಸಂಪುಟದ ಉಪ ಸಮಿತಿಯನ್ನು ಖಾಯಂ ಆಗಿ ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.

| | | | |
|---|---|---|---|
| 1. | ಮುಖ್ಯಮಂತ್ರಿಗಳು | – | ಅಧ್ಯಕ್ಷರು |
| 2. | ಕಾರ್ಮಿಕ ಸಚಿವರು | – | ಸದಸ್ಯರು |
| 3. | ಶಿಕ್ಷಣ ಸಚಿವರು | – | ಸದಸ್ಯರು |
| 4. | ಸಮಾಜ ಕಲ್ಯಾಣ ಸಚಿವರು | – | ಸದಸ್ಯರು |